# ಶ್ರೀಮಾತೆಯವರೊಡನೆ ಮಾತುಕತೆ



(ಭಕ್ತೆ ಸರಯೂ ಬಾಲಾ ದೇವಿ ಅವರ ನೆನಪುಗಳು)

ಒಂದು ಸಂಜೆ ಶ್ರೀಮಾತೆಯ ಬಳಿಗೆ ಬಂದು ನಮಸ್ಕರಿಸಿದೆ. ಗೋಲಾಪ್ ಮಾ ನನ್ನನ್ನು ನೋಡಿದ ತಕ್ಷಣ ಹೇಳಿದರು– "ನೋಡು. ಕಾಶಿಯಿಂದ ತನ್ನ ಗುರುವಿನ ಸಲುವಾಗಿ ಹಣ ಸಂಗ್ರಹಿಸಲು ಒಬ್ಬಳು ಸಂನ್ಯಾಸಿನಿ ಬಂದಿದ್ದಾಳೆ. ನೀನೂ ಸ್ವಲ್ಪ ಹಣ ಕೊಡು." ನಾನು ಒಪ್ಪಿದೆ. ಶ್ರೀಮಾತೆ ನಗುತ್ತಾ ಹೇಳಿದರು: "ನನ್ನನ್ನೂ ಹಿಡಿದಿದ್ದಳು. ನಾನು ಯಾರ ಬಳಿ ತಾನೆ ಕೇಳಲಿ, ಹೇಳಮ್ಮಾ ? ಅವಳಿಗೆ ಹೇಳಿದೆ, "ಇರು ಇಲ್ಲೇ, ಏನಾದರೂ ಒಂದು ವ್ಯವಸ್ಥೆ ಆಗುತ್ತದೆ." ಮುಂದುವರೆದು ಶ್ರೀಮಾತೆ ನಿಧಾನವಾಗಿ ನನ್ನ ಕಿವಿಯಲ್ಲಿ ಹೇಳಿದರು: "ಗೋಲಾಪ್ ಮೂರು ಕಾಸು ಕೊಟ್ಟಿದ್ದಾಳೆ."

ಸ್ವಲ್ಪ ಸಮಯದ ನಂತರ ಆ ಸಂನ್ಯಾಸಿನಿ ಬಂದಳು. ಬಲರಾಮ್ ಬಸುವಿನ ಮನೆಯಲ್ಲೂ ಸಹ ಯಥಾಶಕ್ತಿ ಹಣ ತೆಗೆದುಕೊಂಡು ಬಂದಿದ್ದಾಳೆ. ಬಹಳ ದೊಡ್ಡ ಸಂಸಾರ ಹೊತ್ತಿದ್ದ ಈಕೆ (ಏಳು ಜನ ಮಕ್ಕಳು !) ಮಕ್ಕಳೆಲ್ಲ ದೊಡ್ಡವರಾದ ಮೇಲೆ ಸಂನ್ಯಾಸ ಸ್ವೀಕರಿಸಿದ್ದಾಳೆ. ನಮಸ್ಕಾರ ಮಾಡುತ್ತಾ ಹೀಗೆ ಹೇಳಿದಳು: "ಗುರುನಿಂದೆ ಒಳ್ಳೆಯದಲ್ಲ. ಅದರೇನು ಮಾಡುವುದು? ನನ್ನ ಗುರು ಬಹಳ ಜಗಳಗಂಟರಾಗಿದ್ದರು. ಈಗ ವಯಸ್ಸಾಯಿತು. ಮೊದಲು ಕೋರ್ಟು ಕಚೇರಿ ಎಂದು ಬಹಳ ಓಡಾಡುತ್ತಿದ್ದರು. ವಸೂಲಿದಾರರು ಕೋರ್ಟಿನ ಆಜ್ಞೆ ಪಡೆದು ಅವರನ್ನು ಬಂಧಿಸಲು ಹೊರಟಿದ್ದಾರೆ. ಅವರನ್ನು ಕಾಪಾಡುವ ಸಲುವಾಗಿ ಭಿಕ್ಷೆ ಬೇಡುತ್ತ ಸುತ್ತಾಡುತ್ತಿದ್ದೇನೆ."

ಶ್ರೀಮಾತೆ ಈ ಮಾತನ್ನು ಕೇಳಿ ಒಂದು ಶ್ಲೋಕವನ್ನು ಹೇಳಿದರು. ಶ್ಲೋಕ ಮರೆತಿದ್ದೇನೆ. "ಒಳ್ಳೆಯ ವಿಷಯವಾದರೆ ಗುರುವಿಗೂ ಸಹ ಹೇಳಬಹುದು. ಅದರಿಂದ ಪಾಪದ ಭಯವಿಲ್ಲ" ಎಂಬುದು ಅದರ ಭಾವಾರ್ಥ. ಮುಂದುವರೆದು ಶ್ರೀಮಾತೆ ಹೇಳಿದರು: "ಗುರುಭಕ್ತಿ ಬಹಳ ಮುಖ್ಯ. ಗುರು ಯಾರೇ ಆಗಿದ್ದರೂ ಗುರುಭಕ್ತಿಯಿಂದಲೇ ಮುಕ್ತಿ ಸಾಧ್ಯ. ಶ್ರೀರಾಮಕೃಷ್ಣರ ಶಿಷ್ಯರು ಮತ್ತು ಭಕ್ತರನ್ನು ನೋಡು, ಅವರಿಗೆಲ್ಲ ಅದೆಷ್ಟು ಗುರುಭಕ್ತಿ ! ಇಂತಹ ಅಧಿಕ ಗುರುಭಕ್ತಿಯಿದ್ದವರು ಗುರುವಂಶದವರನ್ನು ಗೌರವಿಸುವುದಿರಲಿ, ಗುರುವಿನ ಗ್ರಾಮದ ಬೆಕ್ಕನ್ನೂ ಗೌರವಿಸುತ್ತಾರೆ."

ಆ ಸಂನ್ಯಾಸಿನಿ ಮುಂಜಾನೆ ೩ ಗಂಟೆಯಿಂದ ೮ ಗಂಟೆಯವರೆಗೆ ಧ್ಯಾನ ಜಪಗಳನ್ನು ಮಾಡುತ್ತಿದ್ದಳು. ಅದಕ್ಕಾಗಿ ಮಡಿ ಬಟ್ಟೆಯನ್ನು ಕೇಳಿದಳು. ಶ್ರೀಮಾತೆಯವರು ಭೂದೇವನ (ಶ್ರೀಮಾತೆಯವರ ತಮ್ಮನ ಮಗ) ವಸ್ತ್ರವೊಂದನ್ನು ಕೊಟ್ಟರು. ಸಂನ್ಯಾಸಿನಿ ನನಗೆ "ರಾತ್ರಿ ಇಲ್ಲಿರುವುದಾದರೆ ನಿನಗೆ ಆಧ್ಯಾತ್ಮಿಕ ಸಾಧನೆಗೆ ಸಂಬಂಧಿಸಿದ ಉಪದೇಶ ಕೊಡಬಲ್ಲೆ " ಎಂದಳು. ಅದಕ್ಕೆ ನಾನು, "ಇಲ್ಲ, ನಾನು ಹೋಗಬೇಕಾಗಿದೆ" ಎಂದು ಉತ್ತರ ಕೊಟ್ಟೆ. ಸಂಜೆಯ ಆರತಿಯ ನಂತರ ಶ್ರೀಮಾತೆ ಯವರಿಗೆ ನಮಸ್ಕರಿಸಿ ಹೊರಟೆ.

೧೧-೨-೧೯೧೨

ಇಂದು ಶ್ರೀಮಾತೆಯವರ ಬಳಿಗೆ ಬಂದು ಪ್ರಣಾಮ ಮಾಡುತ್ತಿದ್ದಂತೆ ಅವರು ಬಹು ದುಃಖದಿಂದ ಹೇಳಿದರು – "ಓಹ್! ಗಿರೀಶ್‌ಬಾಬು ದೇಹತ್ಯಾಗ ಮಾಡಿದ್ದಾನೆ. ಇಂದಿಗೆ ನಾಲ್ಕು ದಿನ ಆಯಿತು. ನಾಲ್ಕನೆಯ ದಿನದ ಕಾರ್ಯಕ್ಕಾಗಿ ನನ್ನನ್ನು ಕರೆಯಲು ಬಂದಿದ್ದರು. ಆತನೇ ಇಲ್ಲದಿದ್ದಾಗ ಅಲ್ಲಿಗೆ ಹೋಗಿ ತಾನೆ ಏನು ಮಾಡಲಿ? ಒಂದು ದೊಡ್ಡ ವಜ್ರವೇ ಕುಸಿದುಬಿತ್ತು. ಎಂತಹ ಭಕ್ತಿ ವಿಶ್ವಾಸ ಆತನದು! ನಿನಗೆ ಗೊತ್ತೇನು? ಗಿರೀಶ್ ಶ್ರೀರಾಮಕೃಷ್ಣರನ್ನು ತನ್ನ ಮಗನನ್ನಾಗಿ ಪಡೆಯಲು ಇಷ್ಟಪಟ್ಟಿದ್ದ. ಅದಕ್ಕೆ ಗುರುದೇವರು, "ನನಗಾವ ತೀಟೆ, ನಿನ್ನ ಮಗನಾಗಿ ಹುಟ್ಟಲು?" ಎಂದಿದ್ದರು. ಆದರೆ ನೋಡು ವಿಚಿತ್ರವನ್ನು! ಶ್ರೀರಾಮಕೃಷ್ಣರ ದೇಹತ್ಯಾಗದ ನಂತರ ಸ್ವಲ್ಪ ಕಾಲದಲ್ಲೇ ಗಿರೀಶ್‌ಗೆ ಒಂದು ಮಗು ವಾಯಿತು. ಅದ್ಭುತ ಶಿಶು! ನಾಲ್ಕು ವರ್ಷವಾದರೂ ಯಾರ ಜೊತೆಗೂ ಮಾತುಕತೆ ಇಲ್ಲ. ಎಲ್ಲವನ್ನೂ ಹಾವಭಾವದಿಂದಲೇ ತೋರಿಸುತ್ತಿದ್ದ. ಗಿರೀಶ್ ಅಂತೂ ಆ ಮಗುವನ್ನು ಶ್ರೀರಾಮಕೃಷ್ಣರೆಂದೇ ಭಾವಿಸಿದ್ದ; ಆ ಮಗುವಿಗಾಗಿ ತಟ್ಟೆ ಲೋಟ, ಬಟ್ಟೆ ಪಾತ್ರೆ ಎಲ್ಲವನ್ನೂ ಪ್ರತ್ಯೇಕವಾಗಿ ಇಟ್ಟಿದ್ದ. ಬೇರೆ ಯಾರೂ ಅವುಗಳನ್ನು ಉಪಯೋಗಿಸುವಂತಿಲ್ಲ. ಇಂತಹ ಭಕ್ತಿಯ ಪರಾಕಾಷ್ಠತೆ ಯಾರಿಗೆ ತಾನೆ ಅರ್ಥವಾಗುತ್ತದೆ! ಒಂದು ದಿನ ಆ ಮಗು ನನ್ನನ್ನು ನೋಡಲು ಬಹಳ ಕಾತರನಾಗಿ ಎಲ್ಲರ ಕೈಯನ್ನೂ ಎಳೆದು ಊಊ... ಎನ್ನುತ್ತ ನನ್ನ ಚಿತ್ರದ ಕಡೆ ತೋರಿಸಲು ಶುರು ಮಾಡಿತು. ನಾನು ಆಗ ಮಹಡಿಯ ಮೇಲಿದ್ದೆ. ಮೊದಮೊದಲು ಯಾರೂ ಅರ್ಥಮಾಡಿಕೊಳ್ಳಲಿಲ್ಲ. ನಂತರ ನನ್ನ ಬಳಿ ಕರೆತಂದರು. ಅಷ್ಟು ಚಿಕ್ಕ ವಯಸ್ಸು, ಅಂತಹುದರಲ್ಲಿ ನನ್ನ ಕಾಲಿಗೆ ಬಿದ್ದು ನಮಸ್ಕರಿಸಿತು! ನಂತರ ಕೆಳಗೆ ಹೋಗಿ ಗಿರೀಶ್‌ನನ್ನು ಒಂದೇ ಸಮನೆ ನನ್ನ ಬಳಿ ಬರುವಂತೆ ಒತ್ತಾಯಿಸಲಾರಂಭಿಸಿತು. ಗಿರೀಶ್ ಒಂದೇ ಸಮನೆ ಅಳುತ್ತಾ – "ಅಯ್ಯೋ! ನಾನು ಪಾಪಿ, ಮಹಾಪಾಪಿ. ಶ್ರೀಮಾತೆಯ ದರ್ಶನಭಾಗ್ಯ ನನಗಿದೆಯೇನು?" ಎಂದ. ಮಗುವಂತೂ ಬಿಡಲೊಲ್ಲದು. ಕೊನೆಗೆ ಗಿರೀಶ್ ಮಗುವನ್ನು ಕಂಕುಳಲ್ಲಿ ಹೊತ್ತು ನಡುಗುತ್ತಾ, ಎರಡೂ ಕಣ್ಣುಗಳಲ್ಲಿ ಒಂದೇ ಸಮನೆ ನೀರು ಸುರಿಸುತ್ತ ಬಂದು ನನ್ನ ಕಾಲಿನ ಬಳಿ ಉದ್ದಂಡ ಪ್ರಣಾಮ ಮಾಡಿದ. ಗದ್ಗದ ಕಂಠದಿಂದ, "ತಾಯಿ, ಈ ಮಗುವಿನಿಂದಾಗಿ ಇಂದು ನಿನ್ನ ಚರಣದರ್ಶನ ಪಡೆಯುವಂತಾಯಿತು"ಎಂದು ಹೇಳಿದ. ಆದರೆ ನೋಡು, ಆ ಮಗು ನಾಲ್ಕೇ ವರ್ಷದಲ್ಲಿ ಸತ್ತು ಹೋಯಿತು!

ಇದಕ್ಕೆ ಮೊದಲು ಒಂದು ದಿನ, ಗಿರೀಶ್ ಮತ್ತು ಆತನ ಹೆಂಡತಿ ತಮ್ಮ ಮನೆಯ ಮೇಲ್ಛಾವಣಿಯಲ್ಲಿದ್ದರು. ನಾನು ಆಗ ಬಲರಾಮ್ ಬಾಬುವಿನ ಮನೆಯಲ್ಲಿದ್ದೆ. ಸಂಜೆ ಮನೆಯ ಛಾವಣಿಯ ಮೇಲೆ ಓಡಾಡಲು ಹೋದೆ. ನನಗೇನು ಗೊತ್ತು ಗಿರೀಶ್ ಮನೆಯ ಮೇಲಿಂದ ಬಲರಾಮನ ಮನೆಯ ಛಾವಣಿ ಕಾಣಿಸುತ್ತದೆ ಎಂದು? ಗಿರೀಶನ ಹೆಂಡತಿ ಅವನಿಗೆ ಹೇಳಿದಳಂತೆ –"ನೋಡಿ, ಶ್ರೀಮಾತೆಯವರು ಆ ಮನೆಯ ಮೇಲೆ ಓಡಾಡುತ್ತಿದ್ದಾರೆ" ಎಂದು. ತಕ್ಷಣ ಎದುರಾಗಿ ತಿರುಗಿ ನಿಂತು ಗಿರೀಶ್ ಹೇಳಿದನಂತೆ, "ಇಲ್ಲ ಇಲ್ಲ. ನನ್ನದು ಪಾಪದ ಕಣ್ಣುಗಳು. ಈ ರೀತಿ ಕದ್ದುಮುಚ್ಚಿ ಶ್ರೀಮಾತೆಯನ್ನು ನೋಡಲಾರೆ." ಹೀಗೆ ಹೇಳಿ ಬೇಗಬೇಗನೆ ಕೆಳಗೆ ಇಳಿದು ಹೋದನಂತೆ." (ಮುಂದುವರಿಯುವುದು)